## ಅಗ್ರಹಾರ ಕೃಷ್ಣಮೂರ್ತಿ

**ಲೋಹಿಯಾ ಮತ್ತು ಗಾಂಧಿಯನ್ನು ಉಸಿರಾಡುವಂತೆ ಹಚ್ಚಿಕೊಂಡಿದ್ದ ಡಿ.ಎಸ್. ನಾಗಭೂಷಣ, ತಾವು ಹಚ್ಚಿಕೊಂಡಿದ್ದನ್ನು ಸಹೃದಯರಿಗೂ ತಲುಪಿಸಲು ಹಂಬಲಿಸುತ್ತಿದ್ದವರು. 'ಗಾಂಧಿ ಕಥನ' ಅವರ ಗಾಂಧಿಪ್ರೀತಿಯ ಫಲವೂ ಹೌದು, ಹೊಸ ತಲೆಮಾರಿಗೆ ಗಾಂಧಿಯನ್ನು ದಾಟಿಸುವ ಪ್ರಯತ್ನವೂ ಹೌದು. ನಿಷ್ಠುರ ಸತ್ಯಗಳನ್ನು ಹೇಳುವ ಮೂಲಕ ಲೋಕವಿರೋಧದ ಜೊತೆಗೆ ಸ್ನೇಹಿತರನ್ನೂ ವಿಮರ್ಶಾತ್ಮಕ ಅಂತರದಲ್ಲೇ ಉಳಿಸಿಕೊಳ್ಳುವಂತೆ ಬದುಕಿದ ಡಿ.ಎಸ್.ಎನ್. ಅವರನ್ನು ಈಗ ನೆನಪಿಸಿಕೊಳ್ಳುವ ಸಮಯ.**

ಆಡುವ ಮಾತು, ಮಾಡುವ ಕ್ರಿಯೆಯಲ್ಲಿ ಗುಲಗಂಜಿ ತೂಕದ ನಿಖರತೆಯಿತ್ತು. ಅದು ನಿಮಗೆ ಒಪ್ಪಿಗೆಯಾಗಬಹುದು, ಬಿಡಬಹುದು. ಬಹುತೇಕರು ಒಪ್ಪುತ್ತಿದ್ದರಷ್ಟೇ ಅಲ್ಲ, ಮೆಚ್ಚುತ್ತಿದ್ದರು. ಒಪ್ಪದಿದ್ದವರು ಇದು ಸಹವಾಸ ಅಲ್ಲವೆಂದು ದೂರ ಸರಿಯುತ್ತಿದ್ದರಾದರೂ ಆತನ ತೂಕದ ಕಡೆ ಒಂದು ಕಣ್ಣಿಟ್ಟಿರುತ್ತಿದ್ದರು. ಆತ ಲೋಕ ನಡಾವಳಿಯ ಐಬುಗಳನ್ನು ಅಳೆದು ತೂಗುತ್ತಿದ್ದ ಆಸಾಮಿ. ಆ ಲೋಕ ನಡಾವಳಿಯೆಂಬುದು ವ್ಯಷ್ಟಿ ಸಮಷ್ಟಿಯ ಸಕಲ ವ್ಯವಹಾರಗಳನ್ನೊಳಗೊಂಡಂಥದ್ದು. ಇದು ಒಂದು ರೀತಿಯಲ್ಲಿ ರೇಜಿಗೆಯ ಕೆಲಸ. ಆದರೆ ಈತ ಅದನ್ನು ಪ್ರಜ್ಞಾಪೂರ್ವಕವಾಗಿ ತಲೆಯ ಮೇಲೆ ಹೊತ್ತು ನಿಂತಂಥ ಧೀರ.

ಎಲ್ಲ ರೀತಿಯಿಂದಲೂ ಮಹಾಧೀರೆಯಾಗಿದ್ದ ಈತನ ಪತ್ನಿ ಸವಿತಾ ತಮ್ಮ 'ಫೇಸ್‌ಬುಕ್'ನ ಗೋಡೆಯ ಮೇಲೆ, 'ಇಂದು ರಾತ್ರಿ 12.15ಕ್ಕೆ (ಮೇ 19, 2022) ಶ್ರೀ ಡಿ.ಎಸ್. ನಾಗಭೂಷಣ ಅವರು ತೀರಿಕೊಂಡರು. ನಮನ,' ಎಂದು ಒಂದು ಸಾಲು ಬರೆದು ಅಂಟಿಸಿದರು. ಪ್ರಾಣ ವಿಸರ್ಜನೆಯ ಗಳಿಗೆಯಲ್ಲಿ ಬರೆಯುವ ಶಕ್ತಿಯಿದ್ದಿದ್ದರೆ ಈ ಸಾಲನ್ನು ಸ್ವತಃ ತಾನೇ ಬರೆದು ಕಣ್ಮುಚ್ಚುತ್ತಿದ್ದಂಥ ಸ್ವಭಾವ ಈ 'ವಿಪರೀತ ಮನುಷ್ಯ'ನಲ್ಲಿತ್ತು. ಯಾವುದೋ ಕಾಲದಲ್ಲಿ ರೂಪಿಸುತ್ತಿದ್ದ 'ಮಾನವ'ನನ್ನು 'ಹೊಸ ಮನುಷ್ಯ'ನನ್ನಾಗಿ ಪರಿವರ್ತಿಸುತ್ತಿದ್ದ ಈತನ ಬಗ್ಗೆ ದೂರದಿಂದಲೂ ಹತ್ತಿರದಿಂದಲೂ ಬಲ್ಲ ನೂರಾರು ಮಂದಿ ಸಾಮಾಜಿಕ ತಾಣಗಳಲ್ಲಿ ಸಂತಾಪ ವ್ಯಕ್ತಪಡಿಸಿದರು.

ನಾನೂ, 'ಬುಸುಗುಡುತ್ತ ಉರಿಯುತ್ತಿದ್ದ ಗೆಳೆಯ, ಸಹೋದ್ಯೋಗಿ, ಸಹ ಲೇಖಕ, ನಿಷ್ಠುರಿ...' ಎಂದು ಒಂದು ಸಾಲು ಬರೆದು ಕಂಬನಿಯ ಕಾಣಿಕೆ ಸಲ್ಲಿಸಿದ್ದೆ. ಎಲ್ಲರ ಸಂತಾಪ ಪ್ರತಿಕ್ರಿಯೆಗಳನ್ನೂ ಚೆನ್ನಾಗಿ ಬೆರೆಸಿ ಅಗ್ನಿಷ್ಟಿಕೆಯ ಮೇಲಿರಿಸಿ ಕುದಿಸಿದರೆ ನಿರ್ದಾಕ್ಷಿಣ್ಯದವ, ನೇರಸ್ಥ, ಸಿನಿಕ, ಪ್ರಾಮಾಣಿಕ, ಸಮಾಜವಾದಿ, ತತ್ತ್ವನಿಷ್ಠ, ಜಗಳಗಂಟಿ, ನಿಷ್ಠುರಿ ಎಂಬ ವ್ಯಕ್ತಿವಿಶೇಷಣಗಳು ಮೂಸೆಯಿಂದ ಮೇಲೇಳುತ್ತವೆ. ಇದ್ದದ್ದನ್ನು ಇದ್ದಂತೆ, ಕಂಡದ್ದನ್ನು ಕಂಡಂತೆ ಹೇಳುವ ವ್ಯಕ್ತಿಯೊಬ್ಬನಿಗೆ ಜಗಳಗಂಟ, ಸಿನಿಕ ಎನ್ನುವಂಥವು ಸಕಾರಾತ್ಮಕ ವಿಶೇಷಣಗಳೇ ಸರಿ.

ವ್ಯಕ್ತಿಗತ ಸ್ನೇಹ ಸಂಬಂಧಗಳ ವಿಷಯದಲ್ಲಿ ಸಜ್ಜನ ಶ್ರೇಷ್ಠರೆನಿಸಿದ್ದ ರಾಷ್ಟ್ರಕವಿ ಜಿ.ಎಸ್.